ಮೇಲೆ ಮುಗುಚಿಬಿದ್ದು ಊರುಭಂಗಗೊಂಡ ಸುಯೋಧನನಾದೆ. ಎಲ್ಲಿದ್ದರೋ ಹೇಗಿದ್ದರೋ ಅವರು, ಓಡಿಬಂದು ಮೇಲೆತ್ತಿದರು. ಅಂದಿನಿಂದ ಅವರ ಮೇಲಿನ ದುರಾಗ್ರಹ ಬದಲಾಯಿತು. ಅವರಿಗೆ ಸರಿಯಾದ ಪಾರ್ಕನ್ನು ಕಲ್ಪಿಸದ ನಗರಸಭೆಯ ಮೇಲೆ ಸಿಟ್ಟೂ ಬಂತು. ಪ್ರೇಮಿಗಳ ಸಂತತಿ ಸಾವಿರವಾಗಲಿ.

ಕಾಲುವೆ ದಂಡೆ ಕೇವಲ ಜನರ ಸೊತ್ತೆಂದು ತಿಳಿಯಬೇಕಿಲ್ಲ. ಪಶುಪಕ್ಷಿ ಸಸ್ಯಗಳ ಆವಾಸಸ್ಥಾನ ಕೂಡ. ದಂಡೆಗೆ ಅಂಚುಕಟ್ಟಿದಂತೆ ಬೆಳೆದ ಹುಲ್ಲು, ಕೆದರುದಲೆಯ ಈಚಲು, ಆಗಸದ ನೀಲಿಯೇ ಬಿದ್ದು ಹೂಬಿಟ್ಟಂತೆ ಹರಡಿಕೊಳ್ಳುವ ನೆಲಬದನೆ, ಹಳದಿನತ್ತಿನ ಹೂವುಳ್ಳ ನೆಗ್ಗಲು ಬಳ್ಳಿ — ಹೀಗೆ ಅನಾಮಿಕ ಸಸ್ಯಾವಳಿ. ಇವುಗಳಲ್ಲೆಲ್ಲ ಸರ್ವಋತುಗಳಲ್ಲೂ ನಳನಳಿಸುವ ತಂಗಡಿ ನನಗೆ ಪ್ರಿಯ. ಯಾರೋ ಅವಸರದಲ್ಲಿ ಬೀಳಿಸಿಕೊಂಡು ಹೋಗಿರುವ ಹೂಗುಚ್ಛದಂತಿರುವ ಇದು ದಂಡೆಯುದ್ದಕ್ಕೂ ಸ್ವಚ್ಛಂದ ಬೆಳೆದಿದೆ. ಗಿಣಿಹಸುರು ಎಲೆಗಳ ನಡುವೆ ಚಿನ್ನದನೀರಿನಲ್ಲಿ ಅದ್ದಿ ತೆಗೆದಂತಹ ಇದರ ಹೂವು ಎಷ್ಟೊಂದು ಚೆಲುವು. ರಸ್ತೆ ಧೂಳು ಬಿದ್ದಿದ್ದರೂ ತಂಗಡಿ ಪುಷ್ಪಕ್ಕೆ ಮಕರಂದ ಹೀರಲು, ಕಪ್ಪನೆಯ ಗುಂಗೆಹುಳ ಮುತ್ತುತ್ತವೆ. 'ಪೊಲ್ಲಮೆಯೇ ಲೇಸು ನಲ್ಲರ ಮೆಯ್ಯೊಳ್'! ಈ ತಂಗಡಿ ಬಗ್ಗೆ ಒಂದು ಸ್ವಾರಸ್ಯಕರ ಕತೆಯಿದೆ. ಒಮ್ಮೆ ಬ್ರಹ್ಮನಿಗೆ ಸೃಷ್ಟಿಕ್ರಿಯೆಯೇ ಮರೆತುಹೋಯಿತಂತೆ. ಆತ ಕಂಗೆಟ್ಟು ಜಾಂಬವಮುನಿಯ ಮೊರೆಹೋಗಲು, ಮುನಿ ಆತನನ್ನು ತಂಗಡಿಯ ಮುಂದೆ ಕೂರಿಸಿದನಂತೆ. ಗಿಡವು ಚಿಗುರಿ ಮೊಗ್ಗಿಟ್ಟು ಹೂವರಳಿಸುವುದನ್ನೇ ನೋಡುತ್ತ ತಾತನು ಮರೆತ ವಿದ್ಯೆಯನ್ನು ಮರಳಿಪಡೆದನಂತೆ! ಯಾವ ಉಪಚಾರವಿಲ್ಲದೆ ಬೆಳೆಯುವ ತಂಗಡಿ ಪುಷ್ಪವನ್ನು ಮಲ್ಲಿಗೆ ಜಾಜಿ ಸಂಪಿಗೆ ಪ್ರಿಯ ಕವಿಗಳು ಅಲಕ್ಷಿಸಿದ್ದಾರೆ. ಹೀರೇಹೂವಿನ ಮೇಲೆ ಕವಿತೆ ಕಟ್ಟಿದ ಕುವೆಂಪು ಇದ್ದಿದ್ದರೆ, ಇದೂ ಕಾವ್ಯಲೋಕದಲ್ಲಿ ಅಮರತ್ವ ಪಡೆಯುತ್ತಿತ್ತು. ದುಷ್ಕಾಲದಲ್ಲೂ ಬದುಕುವ ಜಿಗುಟುತನವುಳ್ಳ ಈ ಸಸ್ಯಾವಳಿ, ಸಾವನ್ನು ಮುಂದೂಡಲು ವಾಕಿಂಗ್ ಮಾಡುವವರಲ್ಲಿ ಆತ್ಮವಿಶ್ವಾಸ ಹುಟ್ಟಿಸುವುದು ಸುಳ್ಳಲ್ಲ.

ಮೂವತ್ತು ವರ್ಷಗಳ ಹಿಂದೆ ಕಾಲುವೆದಂಡೆ ಜೀವರಾಶಿಗಳ ಆಡುಂಬೊಲವಾಗಿತ್ತು. ಮೊಲ ಕಾಣಿಸುತ್ತಿದ್ದವು; 'ಹೆಜ್ಜೆಯ ಮೇಲೊಂದು ಹೆಜ್ಜೆಯನಿಕ್ಕುತ' ಸಾವಧಾನ ಚಲಿಸುವ ಊಸರವಳ್ಳಿ ಅಡ್ಡಹಾಯುತ್ತಿತ್ತು. ಸಂಜೆಹೊತ್ತಲ್ಲಿ ಮಣ್ಣ ಮೇಲೆ ಗುಳಿತೋಡಿ ಮಲಗುಮನೆ ಕಟ್ಟಿಕೊಳ್ಳುತ್ತಿದ್ದ ನೆಲಗುಬ್ಬಿಗಳು ಫರ್‌ಫರ್ ಹಾರಿ ದಾರಿಬಿಡುತ್ತಿದ್ದವು. ದಡದ ಮರಗಳಲ್ಲಿ ನೀರ್ವಕ್ಕಿಗಳು ಗೂಡುಕಟ್ಟುತ್ತಿದ್ದವು. ಈ ಹಕ್ಕಿಗಳಲ್ಲೆಲ್ಲ ನೀರುಕಾಗೆ ವಿಶಿಷ್ಟ. ಜಲಸ್ತಂಭನ ವಿದ್ಯೆಯಲ್ಲಿ ಪಾರಂಗತನಾಗಿರುವ ಅದು ಮಂದಿಯನ್ನ ಕಂಡೊಡನೆ ಬುಳಕ್ಕನೆ ಮುಳುಗಿ ಇನ್ನೆಲ್ಲೋ ಏಳುತ್ತದೆ. ಈ ಮೀಂಗುಲಿಗನಷ್ಟು ಮಿರಮಿರ ಕಪ್ಪು ಜಗದಲ್ಲಿ ಬೇರೆಕಾಣೆ — ಬ್ಲಾಕ್ ಈಸ್ ಬ್ಯೂಟಿಫುಲ್. ಇವು ದಡದ ಕಲ್ಲಿನ ಮೇಲೆ ಕೂತು ರೆಕ್ಕೆಬಿಚ್ಚಿ ಒಣಗಿಸಿಕೊಳ್ಳುತ್ತವೆ — ಜಳಕ ಮುಗಿಸಿದ ಮದುಮಗಳು ಎಳೆಬಿಸಿಲಿಗೆ ಕೂತಂತೆ. ಇದರ ಕಪ್ಪಿನ ಜೊತೆ ಸ್ಪರ್ಧಿಸುವಂತೆ ಚಾಲಾಕಿಗಣ್ಣಲ್ಲಿ ನೀರನ್ನೇ ನೋಡುತ್ತ ತಪಸ್ಸಿಗೆ ನಿಂತವರಂತೆ, ಬೆಳ್ಳನೆಯ ಕೊಕ್ಕರೆಗಳಿವೆ. ಬಕಧ್ಯಾನಕ್ಕೆ 'ಸಂಚು' ಎಂಬರ್ಥವನ್ನು ಯಾರು ಕೊಟ್ಟರೋ ಕಾಣೆ, ನಾನದನ್ನು ಒಪ್ಪಲಾರೆ. ಈ ಹಕ್ಕಿಗಳ ಜೊತೆ ಗಾಳಹಾಕಿಕೊಂಡು ಕೂತ ಹುಡುಗರೂ ಉಂಟು. ಈ ದಡದ ತವಸಿಗಳಿಗೆ ಮೀನು ನೆವ. ಧ್ಯಾನವೇ ಕೆಲಸ. ತೇಜಸ್ವಿ ಕಾದಂಬರಿಯಿಂದ ತಪ್ಪಿಸಿಕೊಂಡು ಬಂದ ಪಾತ್ರಗಳಂತಿರುವ ಇವು, ಸಂಜೆತನಕ ಕೂತು ನೆಟ್ಟಗೆ ನಾಲ್ಕು ಮೀನನ್ನೂ ಹಿಡಿದಿರುವುದಿಲ್ಲ. 'ಇಷ್ಟು ಮೀನಿಗೆ ಇಡೀ ದಿನ ಕೂರುತ್ತೀರಲ್ಲ?' ಎಂದರೆ, 'ನಿಮಗೆ ಇದೆಲ್ಲ ಗೊತ್ತಾಗೊಲ್ಲ. ಸುಮ್ಮನೆ ವಾಕಿಂಗ್ ಮಾಡಿ' ಎಂಬಂತೆ ನಸುನಗುತ್ತವೆ.

ಹಂಪಿಯ ಸುತ್ತಮುತ್ತ ಹೊಳೆ ಕೆರೆಗಳಿರುವುದರಿಂದ, ಆಗಸದಲ್ಲಿ ನೀರಹಕ್ಕಿಗಳ ಕಾರವಾನುಗಳಿವೆ. ಗದ್ದೆ ಮೇಯಲು ಹೋಗಿದ್ದ ಗಿಳಿವಿಂಡು, ಗೋಡೆಯ ಮೇಲೆ ಎಳೆಯ ಮಕ್ಕಳು ಬರೆದ ಚಿತ್ರದಂತೆ ಹೊಯ್ದಾಡುತ್ತ ಬರುತ್ತವೆ. ಸ್ವಚ್ಛಂದ ಕಾಗೆ ಕೊಕ್ಕರೆಗಳಿಗೆ ಹೋಲಿಸಿದರೆ, ಗಿಳಿ–ಪಾರಿವಾಳ ಪಾಪದವು. ರಾಜರ ಕಾಲದಲ್ಲಿ ಪಾರಿವಾಳವನ್ನು ಪತ್ರ ಬಟವಾಡೆಗೆ ಬಳಸುತ್ತಿದ್ದರಂತೆ. ಹಂಪಿ ಸೀಮೆಯಲ್ಲಿವು ಜೂಜಿನ ಕಾಯಿಗಳಾಗಿವೆ. ಹುಡುಗರು ಬುಟ್ಟಿಗಟ್ಟಲೆ ಪಾರಿವಾಳ ತುಂಬಿತಂದು ಕಾಲುವೆ ಮೇಲೆ ಬಿಡುಗಡೆ ಮಾಡುವರು. ಗಂಡು–ಹೆಣ್ಣನ್ನು ಅಗಲಿಸಿ ಕೂಡಿಸುವ ಪಂದ್ಯವಿದು. ಬಿಡುಗಡೆಯಾದ ಗಂಡು ಅಗಲಿದ ನಲ್ಲೆಯನ್ನು ಕೂಡಲು ಕೋವಿಯಿಂದ ಸಿಡಿದ ಗುಂಡಿನಂತೆ ಗಗನಕ್ಕೆ ಚಿಮ್ಮಿ ಕಣ್ಮರೆಯಾಗುವುದು. ಮೊದಲು ಗೂಡು ಸೇರುವ ಹಕ್ಕಿಯ ಒಡೆಯ ವಿಜೇತನಂತೆ. ಗೂಡಿರುವ ಕಡೆ ಬಾಜಿಕಟ್ಟಿದವರ ಕೋಲಾಹಲ. ಆಗಸಕ್ಕೆ ಕಣ್ಣುನೆಟ್ಟು ಕಾತರಿಸಿ ಕಾಯುವರು. ಮೊದಲು ಪಾರಿವಾಳ ಸಣ್ಣಚುಕ್ಕೆಯಾಗಿ ಗೋಚರಿಸುವುದು. ಬಳಿಕ ಮುಗಿಲಿಂದ ಬಿದ್ದ ಕಲ್ಲಿನಂತೆ ಗೂಡಿಗೆ ಧಾವಿಸುವುದು. ಈ ಪಾರಿವಾಳಗಳ ಸ್ತ್ರೀನಿಷ್ಠೆಯ ರವೆಯಷ್ಟಾದರೂ ಮನುಷ್ಯರಲ್ಲಿ ಇದ್ದಿದ್ದರೆ ಸಮಾಜ ಸ್ವರ್ಗವಾಗಿರುತ್ತಿತ್ತು.

ಮೂಡಣ–ಪಡುವಣದ ಚೌಕಿಮನೆಗಳಲ್ಲಿ ಜರುಗುವ ಬಣ್ಣಗಳಾಟ ನೋಡಬಯಸುವವರು ಕಾಲುವೆ ದಂಡೆಗೆ ಬರಬೇಕು. ನಸುಕಿಗೇ ಬಂದರೆ, ನಿಶೆಗೆ ವಿದಾಯ ಹೇಳುವಂತೆ ಮೂಡಣ ದಿಕ್ಕು ಕೊಯ್ದಿಟ್ಟ ಪಪಾಯಿ ಹಣ್ಣಾಗುತ್ತದೆ. ಅದರ ಹಣೆಗಿಟ್ಟ ನೆತ್ತರ ಬೊಟ್ಟಿನಂತೆ ರವಿ ಮೆಲ್ಲನೆ ಉದಯಿಸುವನು. ಬಳಿಕ ಅರಿಸಿಣ ಮಿಂದ ಮದುವಣಿಗನಂತೆ ಹೊಳೆಯುತ್ತ, ಕ್ರಮೇಣ ಬೆಳ್ಳಿತಟ್ಟೆಯಾಗುವನು. ಹಗಲೆಲ್ಲ ದೀವಟಿಗೆ ಹಿಡಿದು ಉರಿವ ಸೂರ್ಯ ಸಂಜೆ ದಣಿದು ಕೆಂಪು ಚೆಂಡಾಗಿ ತುಂಗಭದ್ರೆಯ ನೀರಿನೊಳಗೆ ಧುಮುಕುವನು. ಆಗ ನೋಡಬೇಕು — ಕಂಪಿಸುವ ಅಲೆಗಳ ಮೇಲೆ ಕಂಬೆಳಕು ಬಿದ್ದು ಕಾಲುವೆ ಹೊನ್ನರಸವಾಗುವುದು. ಹುಣ್ಣಿಮೆಯ ಪವಾಡ ಇನ್ನೊಂದೇ ತೆರ. ಅಕ್ಕಿರೊಟ್ಟಿಯಂತಿರುವ ಚಂದ್ರ ಕಬ್ಬಿನ ಗದ್ದೆಗಳ ಮೇಲೆ ಕಾಣಿಸುವನು. ಅವನ ಮಂದಪ್ರಕಾಶವು ಪ್ರೇಮಿಯ ತುಟಿಯ ಹಾಸದಂತೆ ಗದ್ದೆಗಳ ಮೇಲೆ ಹರಡುವುದು. ಬೆಳಕು–ಕತ್ತಲ ಈ ಮಿಲನ–ವಿದಾಯದ ಆಟಕ್ಕೆ ದಂಡೆ ರಂಗಭೂಮಿಯಾಗುವುದು.

ಈ ರಂಗಭೂಮಿಯಲ್ಲಿ ದುರಂತ ನಾಟಕಗಳೂ ನಡೆಯುತ್ತವೆ. ಹೋದವರ್ಷ ಮುಂಗಾರಿನ ದಿನವಿರಬೇಕು. ಸಂಜೆ ವಾಕಿಂಗಿನಿಂದ ಮರಳುತ್ತಿದ್ದೆ. ಇದ್ದಕ್ಕಿದ್ದಂತೆ ಗುಡುಗೂ ಸಿಡಿಲೂ ಧೂಳುಗಾಳಿಯೂ ಅಕ್ಷೋಹಿಣಿ ಸೈನ್ಯದಂತೆ ಆವರಿಸಿದವು. ನೋಡುತ್ತಿದ್ದಂತೆ, ತಲೆದೂಗುತ್ತ ಗಾಳಿಯಲ್ಲಿ ಗರಿಗೈ ಬೀಸುತ್ತ ಧೀರವಾಗಿ ನಿಂತಿದ್ದ ತೆಂಗಿನಮರಕ್ಕೆ ಖಡ್‌ಖಡೇಲ್ ಸಿಡಿಲು ಬಡಿಯಿತು. ಸುಳಿಸುಟ್ಟು ಗರಿಗಳುದುರಿ ಕಾಂಡವು ಮೃತ್ಯುಸ್ಮಾರಕವಾಗಿ ನಿಂತುಬಿಟ್ಟಿತು. ಭೀತಿಯಿಂದ ಕಂಪಿಸಿದೆ. ಆದರೆ ತಿಂಗಳಲ್ಲೇ ಅದರ ಬುಡಕ್ಕೆ ರೈತನು ಹೊಸಸಸಿ ನೆಟ್ಟನು. ಅದೀಗ ಸುಳಿದೆಗೆದು ಧಸಿ ಒಡೆಯುತ್ತಿದೆ. ಅದರ ಆಸುಪಾಸಲ್ಲಿ ಮಲ್ಲಿಗೆಪೊದೆ, ಮಿಡಿದರೆ ರಸಬಿಡುವ ತನಿಗಬ್ಬು, ಭತ್ತ ಕಳಕಳಿಸುತ್ತಿವೆ — ಸಿಡಿಲ ಕರಾಳತೆಯನ್ನು ಮರೆಸುವಂತೆ.

ಕೆಲವು ಗುರುಪಂಥಗಳಲ್ಲಿ ದೀಕ್ಷೆ ಪಡೆದ ಸಾಧಕರು, ನದಿಯ ಒಂದು ದಡವನ್ನು ಹಿಡಿದು ಹೋಗಿ, ಇನ್ನೊಂದು ದಡದಲ್ಲಿ ವಾಪಸಾಗಬೇಕೆಂಬ ನಿಯಮವಿದೆ. ದಂಡೆಯ ಮೇಲೆ ನಡೆವುದೆಂದರೆ, ಬರೀ ನೀರನ್ನು ನೋಡುವುದಲ್ಲ. ಅದರ ಚಲನೆಯನ್ನು ಪರಿಭಾವಿಸುವುದು; ಜಲದ ಒಳಹೊರಗೆ, ಆಸುಪಾಸು ಇರುವ ಮೀನು, ಹಕ್ಕಿ, ಗಿಡ, ಹೂವು ಹುಲ್ಲು, ಆಗಸ, ಸೂರ್ಯ ಚಂದ್ರರನ್ನು ದರ್ಶಿಸುವುದು; ಮಾನವ ಬದುಕಿನ ಪಾಡುಗಳನ್ನು ಕಾಣುವುದು; ಪ್ರಕೃತಿಯನ್ನೇ ಗುರುವೆಂದು ಭಾವಿಸಿ ಅದರ ಶಾಲೆಯಲ್ಲಿ ಕಲಿಯುವುದು. ■

